**ಸಿ.ಸಿ. ನಂಬರಃ 1813/2025**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 19-12-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ.ಪಿ.ಪಿ. ವಕೀಲರಿಂದ,**

ನಾನು ಫಿರ್ಯಾದಿ ಸೊಸೈಟಿಯಲ್ಲಿ ಕಿರಿಯ ಸಹಾಯಕನಾಗಿ ಕಳೆದ 5 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಪ್ರಕರಣವನ್ನು ನಡೆಸಲು ನಿರ್ದೇಶಕರ ಮಂಡಳಿಯವರು ಅಧಿಕಾರ ನೀಡಿರುತ್ತಾರೆ. ಸದ್ರಿ ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-1 ರ ಮೂಲ ಪ್ರತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ನಿಪಿ-1 ರ ಮೂಲ ಪ್ರತಿ ನಮ್ಮ ಕಛೇರಿಯಲ್ಲಿರುತ್ತದೆ. ಫಿರ್ಯಾದಿ ಸೊಸೈಟಿಯಲ್ಲಿ ಯಾವುದೇ ಸಾಲ ನೀಡಬೇಕಾದರೆ, ಸದ್ರಿ ಸಾಲದ ಅರ್ಜಿಯನ್ನು ನಿರ್ದೇಕರ ಮಂಡಳಿಯ ಸಭೆಯಲ್ಲಿ ಇಡಬೇಕು ಎಂದರೆ ಹೌದು. ಫಿರ್ಯಾದಿ ಸೊಸೈಟಿಯ ನಿರ್ದೇಶಕರ ಮಂಡಳಿಯಲ್ಲಿ ಒಟ್ಟು 15 ಜನ ನಿರ್ದೇಶಕರು ಇರುತ್ತಾರೆ. ಸಾಲ ಮಂಜೂರಾತಿಯ ಬಗ್ಗೆ ನಿರ್ದೇಶಕರ ಮಂಡಳಿಯಲ್ಲಿ ಠರಾವು ಆಗುತ್ತದೆ ಎಂದರೆ ಹೌದು. ಸದ್ರಿ ಠರಾವಿಗೆ ಎಲ್ಲಾ ನಿರ್ದೇಶಕರು ಸಹಿ ಮಾಡುತ್ತಾರೆ ಎಂದರೆ ಹೌದು. ಆ ರೀತಿ ಠರಾವನ್ನು ಈ ದೂರಿನಲ್ಲಿ ಹೇಳಿದ ಸಾಲಕ್ಕೆ ಸಂಬಂಧಿಸಿದಂತೆ ಮಾಡಿರುತ್ತಾರೆ. ಸದ್ರಿ ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ.

2. ಆರೋಪಿಗೆ ಮೀನಿನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಾಲ ಪಡೆದಿರುತ್ತಾರೆ. ದೂರಿನಲ್ಲಿ ಹೇಳಿರುವ ಸಾಲ 36 ಕಂತುಗಳ ಸಾಲ ಆಗಿರುತ್ತದೆ. ಆರೋಪಿಯು ಒಟ್ಟೂ ಸಾಲದ 19 ಕಂತುಗಳನ್ನು ಪಾವತಿಸಿರುತ್ತಾರೆ. ಆರೋಪಿಯ ಸಾಲದ ಖಾತೆಯಲ್ಲಿ ಇಪ್ಪತ್ತೆಂಟು ಸಾವಿರದಾ ನೂರಾ ಆರವತ್ತೆಂಟು ರೂಪಾಯಿ ಬಾಕಿ ಇತ್ತು. ದೂರಿನಲ್ಲಿ ಹೇಳಿರುವ ಸಾಲಕ್ಕೆ ವಾರ್ಷಿಕ 15 ಶೇಕಡಾ ಬಡ್ಡಿ ಆಕರಣೆ ಮಾಡಿರುತ್ತೇವೆ. ಅದೇ ರೀತಿ 3.75 ಶೇಕಡಾ ದಂಡದ ಬಡ್ಡಿಯನ್ನು ಆಕರಣೆ ಮಾಡಿರುತ್ತೇವೆ. ಬಡ್ಡಿ ಮತ್ತು ದಂಡದ ಬಡ್ಡಿಯ ಬಗ್ಗೆ ದೂರು ಮತ್ತು ನೋಟೀಸಿನಲ್ಲಿ ಹೇಳಿರುತ್ತೇವೆ. ನಿಪಿ-9 ಸ್ಟೇಟ್ ಮೆಂಟ್ ನಲ್ಲಿ ದಂಡದ ಬಡ್ಡಿಯ ಬಗ್ಗೆ ನಮೂದು ಮಾಡಿರುವುದಿಲ್ಲ. ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ.

3. ಆರೋಪಿ ಸುಮಾರು 4 ವರ್ಷಗಳಿಂದ ಫಿರ್ಯಾದಿ ಸೊಸೈಟಿಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಆರೋಪಿಯು ದೂರಿನಲ್ಲಿ ಹೇಳಿದ ಸಾಲವನ್ನು ಹೊರತುಪಡಿಸಿ, ಬೇರೆ ಯಾವುದೇ ಸಾಲ ಫಿರ್ಯಾದಿ ಸೊಸೈಟಿಯಲ್ಲಿ ಪಡೆದುಕೊಂಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**